**ದಿನಾಂಕಃ 13.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **1 ಮತ್ತು 2 ನೇ ಪ್ರತಿವಾದಿ ಪರ** ಶ್ರೀ ಹೆಚ್ ಎನ್ ಬಿ ಎನ್ **ವಕೀಲರಿಂದಃ**

ದಾವಾ 1 ನೇ ಅನುಸೂಚಿ ಸ್ವತ್ತಿನ ಉತ್ತರಕ್ಕೆ ತೆಂಗಿನ ಮರ ಇದೆ ಎಂದರೆ ಸರಿ. ಸಾಕ್ಷಿದಾರರಿಗೆ ನಾಲ್ಕು ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿದಾರರು ಅವುಗಳನ್ನು ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಡಿ-8 ರಿಂದ ನಿಡಿ-11 ಎಂದು ಗುರುತಿಸಲಾಯಿತು. ನಿಡಿ-8 ರಿಂದ ನಿಡಿ-11 ರ ಭಾವಚಿತ್ರಗಳಲ್ಲಿ ನನ್ನ ಸಹೋದರ ಚಿಕ್ಕ ಮಹದೇವನ ಹೆಂಡತಿ ರಾಜಮ್ಮರವರು ಇದ್ದಾರೆ ಎಂದರೆ ಸರಿ. ಸದರಿ ನಿಡಿ-8 ರಿಂದ ನಿಡಿ-11 ರ ಭಾವಚಿತ್ರಗಳಲ್ಲಿ ನನ್ನ ತಮ್ಮನ ಹೆಂಡತಿ ರಾಜಮ್ಮರವರು ಸರ್ಕಾರದಿಂದ ಅನುದಾನ ಪಡೆದು ಮನೆ ನಿರ್ಮಿಸಿದ್ದಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನನ್ನ ಆಸ್ತಿಯಲ್ಲಿ ಮೋಸದಿಂದ ಅನುದಾನ ಪಡೆದು ಮನೆ ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-8 ರಿಂದ ನಿಡಿ-11 ರ ಭಾವಚಿತ್ರಗಳಲ್ಲಿ ನನ್ನ ಸಹೋದರ ಚಿಕ್ಕ ಮಹದೇವನ ಹೆಂಡತಿ ರಾಜಮ್ಮರವರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸರ್ಕಾರದವರು ಮಾಲೀಕತ್ವದ ದಾಖಲಾತಿಗಳನ್ನು ಪರಿಶೀಲಿಸಿ ಅನುದಾನ ನೀಡುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿಯು ಮನೆ ನಿರ್ಮಿಸುವಾಗ 2010 ರಲ್ಲಿ ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕೇವಿಯೆಟ್ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು ಸ್ವಾಧೀನತೆ ಹೊಂದಿಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಮತ್ತು ಸ್ವಾಧೀನತೆ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ